ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೦೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೇ ಅಧಿವೇಶನ**

**ಬುಧವಾರ, ದಿನಾಂಕ: ೨೮ನೇ ಜನವರಿ, ೨೦೨೬**

---

**ಸಮೂಹ – III**

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಕಾರವಾರ ಜಿಲ್ಲೆಯ ಅಂಕೋಲ ತಾಲ್ಲೂಕಿನ ಖೇಣಿ ಬಂದರು ನಿರ್ಮಾಣ ಬಗ್ಗೆ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) –**

೧೬ (೨೫೪) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪಶ್ಚಿಮ ಕರಾವಳಿ ಎಷ್ಟು ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದೆ ; ಈ ವ್ಯಾಪ್ತಿಯಲ್ಲಿ ನಿರ್ಮಾಣವಾದ ಬಂದರುಗಳ ಸಂಖ್ಯೆ ಎಷ್ಟು ಮತ್ತು ಅವು ಯಾವ ಯಾವ ಸ್ಥಳದಲ್ಲಿ ಇವೆ ; (ಮಾಹಿತಿ ನೀಡುವುದು)

(ಆ) ಅಂಕೋಲ ತಾಲ್ಲೂಕಿನ ಖೇಣಿ ಬಂದರು ನಿರ್ಮಾಣ ಮಾಡಲು ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡಿದೆಯೇ ; ಹಾಗಿದ್ದಲ್ಲಿ, ಅದರ ಅಂದಾಜು ವೆಚ್ಚ ಎಷ್ಟು ;

(ಇ) ಖೇಣಿ ಬಂದರು ನಿರ್ಮಾಣ ಮಾಡಲು ಭಾರತೀಯ ನೌಕಾನೆಲೆ ಅವರ ಅನುಮತಿ ಪಡೆಯಲಾಗಿದೆಯೇ ;

(ಈ) ಖೇಣಿ ಬಂದರು ನಿರ್ಮಾಣಕ್ಕೆ ಸಾರ್ವಜನಿಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿರುವುದು ನಿಜವೇ ; (ಮಾಹಿತಿ ನೀಡುವುದು)

(ಉ) ಈಗಾಗಲೇ ಬೇಲಿಕೇರಿ ಬಂದರು ಇರುವಾಗ ಪಕ್ಕದಲ್ಲಿ ಮತ್ತೊಂದು ಖೇಣಿ ಬಂದರು ಮಾಡುವ ಉದ್ದೇಶವೇನು ?

## ಮುಖ್ಯಮಂತ್ರಿಗಳ ಒಂದು ಲಕ್ಷ ವಸತಿ ಯೋಜನೆಯ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೭ (೧೫೨) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಖ್ಯಮಂತ್ರಿಗಳ ಒಂದು ಲಕ್ಷ ವಸತಿ ಯೋಜನೆಯಡಿ ಅರ್ಹ ಫಲಾನುಭವಿಗಳನ್ನು ಯಾವ ಯಾವ ಮಾನದಂಡಗಳ ಮೇಲೆ ಆಯ್ಕೆ ಮಾಡಲಾಗುವುದು ; ಸದರಿ ಯೋಜನೆಯಡಿ ಸಲ್ಲಿಸಲಾದ ಒಟ್ಟು ಅರ್ಜಿಗಳು ಮತ್ತು ಅರ್ಹ ಫಲಾನುಭವಿಗಳೆಷ್ಟು ; ಹಾಗೂ ಈ ಯೋಜನೆಯಡಿ ಪ್ರಸ್ತುತ ಎಷ್ಟು ಫ್ಲಾಟ್‌ಗಳು (ಮನೆಗಳು) ಸಿದ್ದಗೊಂಡಿವೆ ಮತ್ತು ಎಲ್ಲಿವೆ ;

(ಆ) ಸದರಿ ಯೋಜನೆಯಡಿ ಎಷ್ಟು ಫಲಾನುಭವಿಗಳು ಮುಂಗಡ ಹಣ ಪಾವತಿಸಿದ್ದಾರೆ ಹಾಗೂ ಒಟ್ಟು ಮೊತ್ತವೆಷ್ಟು ಮನೆ ಹಂಚಿಕೆ ವಿಳಂಬಕ್ಕೆ ಇರುವ ಕಾರಣಗಳೇನು ; (ವಿವರ ನೀಡುವುದು)

(ಇ) ಬೆಂಗಳೂರು ನಗರದ ಕೋಗಿಲು ಬಡಾವಣೆಯಲ್ಲಿ ನಿವಾಸಿಗಳಿಗೆ ವಸತಿ ಸೌಲಭ್ಯ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ; ಇದ್ದಲ್ಲಿ, ಈ ಹಿಂದೆ ಅರ್ಜಿ ಸಲ್ಲಿಸಿ ಕಾಯುತ್ತಿರುವ ಅರ್ಹಫಲಾನುಭವಿಗಳಿಗಿಂತ ಮುಂಚೆಯೇ ಕೋಗಿಲು ಬಡಾವಣೆ ನಿವಾಸಿಗಳಿಗೆ ವಸತಿ ಸೌಲಭ್ಯ ನೀಡಲು ಇರುವ ಮಾನದಂಡಗಳು ಮತ್ತು ಕಾರಣಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಇ–ಪೌತಿ ಖಾತೆಯು ಸಾಧಿಸಿರುವ ಪ್ರಗತಿಯ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೮ (೧೨೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮನೆಯ ಮುಖ್ಯಸ್ಥರ ಹೆಸರಿಗೆ ಇದ್ದ ಜಮೀನು ಅವರ ಮರಣಾ ನಂತರ ಅವರ ಮಕ್ಕಳ ಅಥವಾ ಅವರ ವಾರಸುದಾರರ ಹೆಸರಿಗೆ ಮಗದೊಮ್ಮೆ ಖಾತೆ ಮಾಡಲು ಸರ್ಕಾರವು ೨೦೨೦ರಲ್ಲಿ ಪೌತಿ ಖಾತೆ ಜಾರಿಗೆ ತಂದಿದ್ದು ಸದರಿ ಇ–ಪೌತಿ ಖಾತೆ ಯೋಜನೆಯು ಸಮರ್ಪಕವಾಗಿ ಜಾರಿಯಾಗದೇ ಪ್ರಗತಿ ಕುಂಠಿತಗೊಂಡ ಕಾರಣ ಜಮೀನು ಮಾಲೀಕರು ಬಹಳ ತೊಂದರೆಗಳನ್ನು ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಈ ಯೋಜನೆಯು ಜಾರಿಯಾದಗಿನಿಂದ ರಾಜ್ಯದಲ್ಲಿ ಸಾಧಿಸಿರುವ ಪ್ರಗತಿ ಎಷ್ಟು ; ಮುಖ್ಯವಾಗಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಪೌತಿ ಖಾತೆಯು ಸಾಧಿಸಿರುವ ಪ್ರಗತಿಯೇನು ; (ತಾಲ್ಲೂಕುವಾರು ಮತ್ತು ಜಿಲ್ಲೆವಾರು ಮಾಹಿತಿ ನೀಡುವುದು)

(ಇ) ಸದರಿ ಯೋಜನೆಯ ಪ್ರಗತಿಯನ್ನು ತೀವ್ರಗೊಳಿಸಲು ಸರ್ಕಾರ ಹಾಕಿಗೊಂಡಿರುವ ಕ್ರಮಗಳೇನು?

## ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಪಡಿಸಿರುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೯ (೧೬೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (KSHIP) ೨೦೨೪ ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಯ (Connecting Roads) ಯಾವ ಯಾವ ರಸ್ತೆ

ಕಾಮಗಾರಿಗಳ ಯೋಜನೆಯನ್ನು ರೂಪಿಸಲಾಗಿದೆ; ಪ್ರತಿ ಕಾಮಗಾರಿಯ ವೆಚ್ಚವೆಷ್ಟು ; ಕಾಮಗಾರಿಗಳು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಡಿಯಲ್ಲಿ ೨೦೨೪ರಿಂದ ಈವರೆಗೂ ಕೋಲಾರ ಹಾಗೂ ಕೋಲಾರ ಜಿಲ್ಲೆಗೆ ಹೊಂದಿಕೊಳ್ಳುವ ರಸ್ತೆಯ (Connecting Roads) ಯಾವ ಯಾವ ರಸ್ತೆ ಕಾಮಗಾರಿಗಳ ಯೋಜನೆಯನ್ನು ರೂಪಿಸಲಾಗಿದೆ ; ಪ್ರತಿ ಕಾಮಗಾರಿಯ ವೆಚ್ಚವೆಷ್ಟು ; ಕಾಮಗಾರಿಗಳು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ವೇಮಗಲ್‌ನಿಂದ ತಮಿಳುನಾಡು ಗಡಿಯ ಕಿ.ಮೀ. ೩೬.೫೮೬ ವರೆಗಿನ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಅನ್ಯೂಟಿ ಅಡಿಯಲ್ಲಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಹೊಸಕೋಟೆಯಿಂದ ಮಾಲೂರುವರೆಗೆ ಹಾಗೂ ಮಾಲೂರು ಎಲಿವೇಟೆಡ್ ಕಾರಿಡಾರ್‌ನ ಮಾಲೂರು ಕೈಗಾರಿಕಾ ಪ್ರದೇಶದ ಕಿ.ಮೀ. ೨೫.೬೧೫ ವರೆಗಿನ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಅನ್ಯೂಟಿ ಅಡಿಯಲ್ಲಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಉ) ದೇವನಹಳ್ಳಿ–ವೇಮಗಲ್ ಕೋಲಾರ ಕಿ.ಮೀ. ೪೯.೨೮೪ ವರೆಗಿನ ಉದ್ದಕ್ಕೆ ಪಿಪಿಪಿ–ಡಿಬಿಎಫ್‌ಒಎಂಟಿ–ಹೈಬ್ರಿಡ್ ಆನ್ಯೂಟಿ ಅಡಿಯಲ್ಲಿ ರಸ್ತೆಯ ಅಭಿವೃದ್ಧಿಪಡಿಸುವ ಕಾಮಗಾರಿಯು ಯಾವ ಹಂತದಲ್ಲಿದೆ ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಟೋಲ್ ಪ್ಲಾಜಾದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೦ (೧೮೬) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚೆಗೆ ಮಾನ್ಯ ವಿಧಾನ ಪರಿಷತ್ ಸದಸ್ಯರು ವಿಜಯಪುರ ನಗರದ ಹೊರಗಿನ ಬೆಂಗಳೂರು ಸೋಲಾಪುರ ರಾಷ್ಟ್ರೀಯ ಹೆದ್ದಾರಿ–೫೨ರ ಟೋಲ್ ಪ್ಲಾಜಾದಲ್ಲಿ ಸಂಚರಿಸುವಾಗ, ಅವರ ವಾಹನವನ್ನು ತಡೆದು ದೃಢೀಕರಣದ ನೆಪದಲ್ಲಿ ಅವಮಾನ ಹಾಗೂ ದೌರ್ಜನ್ಯ ಎಸಗಿರುವ ಘಟನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಘಟನೆಯ ಕುರಿತು ಸರ್ಕಾರವು ಇದುವರೆಗೆ ಕೈಗೊಂಡಿರುವ ಕ್ರಮಗಳೇನು; ತಪ್ಪಿತಸ್ಥ ಟೋಲ್ ಸಿಬ್ಬಂದಿ ಅಥವಾ ಏಜೆನ್ಸಿಯ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಇ) ಟೋಲ್ ಪ್ಲಾಜಾಗಳನ್ನು ಆಂಬ್ಯುಲೆನ್ಸ್ ಮತ್ತು ಗಣ್ಯ ವ್ಯಕ್ತಿಗಳ (ವಿಐಪಿ) ವಾಹನಗಳಿಗಾಗಿ ಮೀಸಲಿರುವ ಪ್ರತ್ಯೇಕ ಲೇನ್‌ಗಳಲ್ಲಿ ಅನಧಿಕೃತ ವಾಹನಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ತಡೆಯಲು ಹಾಗೂ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಹೊರಡಿಸಿರುವ ಆದೇಶಗಳ ವಿವರಗಳೇನು ?

## ಸಿಂಧನೂರು ತಾಲ್ಲೂಕಿನಲ್ಲಿ ಪ್ರಾದೇಶಿಕ ಸಾರಿಗೆ ಆಯುಕ್ತರ (RTO) ಕಛೇರಿಯನ್ನು ತೆರೆಯುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೧ (೧೭೫) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕು ಭೌಗೋಳಿಕವಾಗಿ ದೊಡ್ಡ ತಾಲ್ಲೂಕು ಹಾಗೂ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು, ವಾರ್ಷಿಕವಾಗಿ ರಾಯಚೂರು ಜಿಲ್ಲೆಯಲ್ಲೇ ೦೨ನೇ ಅತೀ ದೊಡ್ಡ ವಾಹನಗಳನ್ನು ಖರೀದಿಸುವ ತಾಲ್ಲೂಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಿಂಧನೂರು ತಾಲ್ಲೂಕು ಜಿಲ್ಲಾ ಕೇಂದ್ರಕ್ಕೆ ಸುಮಾರು ೯೩ ಕಿ.ಮೀ. ದೂರವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸಿಂಧನೂರು ತಾಲ್ಲೂಕಿನಲ್ಲಿ ಪ್ರಾದೇಶಿಕ ಸಾರಿಗೆ ಆಯುಕ್ತರ ಕಛೇರಿಯನ್ನು ತೆರೆಯಲು ಪೂರೈಕೆಯಾಗದಿರುವ ಮಾನದಂಡಗಳೇನು ;

(ಈ) ಸಿಂಧನೂರು ತಾಲ್ಲೂಕಿನಲ್ಲಿ ಪ್ರಾದೇಶಿಕ ಸಾರಿಗೆ ಆಯುಕ್ತರ ಕಛೇರಿಯನ್ನು ತೆರೆಯುವ ಕುರಿತು ಸರ್ಕಾರದ ನಿಲುವೇನು ? (ಈ ಕುರಿತು ತಿಳಿಸುವುದು)

## ಧಾರವಾಡ ನಗರ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಯಡಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨ (೨೩೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಯಡಿ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; (ವಿಧಾನಸಭಾ ಕ್ಷೇತ್ರಾವಾರು ಸಂಕ್ಷಿಪ್ತ ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷದಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಸದರಿ ಇಲಾಖೆಯಡಿ ಮಹಾನಗರ ಪಾಲಿಕೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ಹಾಗೂ ಸದರಿ ಕಾಮಗಾರಿಗಳಡಿ ಮಂಜೂರು ಮಾಡಲಾಗಿರುವ ಅನುದಾನ ಎಷ್ಟು ?

## ರಾಜ್ಯದ ಸರ್ಕಾರಿ ಮತ್ತು ಖಾಸಗಿ ಬಸ್ಸುಗಳಲ್ಲಿ ಸುರಕ್ಷತಾ ಕ್ರಮಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೩ (೧೭೦) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಕಡೆಗಳಲ್ಲಿ ಸ್ಲೀಪರ್ ಮತ್ತು ಹವಾನಿಯಂತ್ರಿತ ಬಸ್‌ಗಳಲ್ಲಿ ಅಪಘಾತ ಸಂಭವಿಸಿ ಬಸ್ಸಿಗೆ ಬೆಂಕಿ ಹೊತ್ತಿಕೊಂಡು ಜೀವ ಹಾನಿಯಾಗುತ್ತಿರುವುದಕ್ಕೆ ಕಾರಣಗಳೇನು ; ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಈ ತರಹದ ಎಷ್ಟು ಅವಘಡಗಳು ಸಂಭವಿಸಿವೆ ; ಈ ತರಹದ ಅವಘಡಗಳಲ್ಲಿ ಎಷ್ಟು ಸಾವು ಸಂಭವಿಸಿದೆ ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಸಂಚರಿಸುತ್ತಿರುವ ಸರ್ಕಾರಿ ಮತ್ತು ಖಾಸಗಿ ಹವಾನಿಯಂತ್ರಿತ ಮತ್ತು ಸ್ಲೀಪರ್ ಬಸ್‌ಗಳಲ್ಲಿ ಸುರಕ್ಷತಾ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆಯೇ ; ಈ ಬಗ್ಗೆ ವಿವರ ಮತ್ತು ಮಾರ್ಗಸೂಚಿಗಳ ಪ್ರತಿ ನೀಡುವುದು ;

(ಇ) ಬಸ್ಸುಗಳಲ್ಲಿ ತುರ್ತು ನಿರ್ಗಮನ ವ್ಯವಸ್ಥೆ, ದೊಡ್ಡ ಗಾಜಿನ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು, ಅಗ್ನಿಶಾಮಕ ವ್ಯವಸ್ಥೆಗಳು ಇರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಲಾಗುತ್ತಿದೆಯೇ ; ರಾಜ್ಯದಲ್ಲಿ ಈವರೆಗೆ ಎಷ್ಟು ಬಸ್ಸುಗಳ ಪರಿಶೀಲನೆ ನಡೆಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸುರಕ್ಷತೆ ಬಗ್ಗೆ ಪರೀಕ್ಷಿಸುವ ಪ್ರಾಧಿಕಾರ ಯಾವುದು ; ಬಸ್ಸುಗಳ ಲಗೇಜ್ ಬಾಕ್ಸ್‌ಗಳಲ್ಲಿ ತುಂಬುವ ವಸ್ತುಗಳಿಗೆ ನಿರ್ದಿಷ್ಟ ಮಾರ್ಗಸೂಚಿ ಮತ್ತು ಪ್ರಯಾಣಿಕರಿಗೆ ಸುರಕ್ಷತೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತಿದೆಯೇ ;

(ಉ) ಕಳೆದ ೩ ವರ್ಷಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಬಸ್ಸಿನ ಚಾಲಕರ ಅತಿಯಾದ ವೇಗ ಮತ್ತು ಮದ್ಯ ಸೇವಿಸಿ ವಾಹನ ಚಲಾಯಿಸುವುದು, ಚಾಲಕನ ಅಜಾಗರೂಕತೆ ಮುಂತಾದ ಕಾರಣಗಳಿಂದ ಸಂಭವಿಸಿದ ಅಪಘಾತಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಊ) ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಪರವಾನಿಗೆ ನೀಡುವಾಗ ಹಾಗೂ ನವೀಕರಿಸುವಾಗ ಚಾಲಕರನ್ನು ಕಡ್ಡಾಯವಾಗಿ ಆರೋಗ್ಯ ತಪಾಸಣೆಗೆ ಒಳಪಡಿಸಲು ಇರುವ ಸಮಸ್ಯೆಗಳು ಏನು ?

## ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆ ಬಾಕಿ ಮತ್ತು ಅನುಭವಿಸುತ್ತಿರುವ ನಷ್ಟದ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೨೪ (೧೯೩) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಿಗೆ ಸಂಸ್ಥೆಗಳು ಎಷ್ಟು ; ಸದರಿ ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ನೌಕರರ ಸಂಖ್ಯೆ ಎಷ್ಟು ; ಸದರಿ ನೌಕರರಿಗೆ ಯಾವ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಲಾಗಿದೆ ; ಯಾವ ನಿಯಮಗಳಡಿ ವೇತನ ಪರಿಷ್ಕರಣೆ ಮಾಡಲಾಗುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಸಾರಿಗೆ ಸಂಸ್ಥೆಗಳಲ್ಲಿ ಸಾರ್ವಜನಿಕರ ಸೇವೆಗಾಗಿ ಲಭ್ಯವಿರುವ ಬಸ್‌ಗಳ ಸಂಖ್ಯೆ ಎಷ್ಟು ; ಕಳೆದ ೩ ವರ್ಷಗಳಲ್ಲಿ ಎಷ್ಟು ನೂತನ ಬಸ್‌ಗಳನ್ನು ಯಾವ ಯಾವ ಸಾರಿಗೆ ಸಂಸ್ಥೆಗಳಿಗೆ ಯಾವ ವರ್ಷದಲ್ಲಿ ನೀಡಲಾಗಿದೆ ;

(ಇ) ೨೦೨೩-೨೪, ೨೦೨೪-೨೫ ಹಾಗೂ ೨೦೨೫-೨೬ನೇ ಸಾಲಿನಲ್ಲಿ ಶಕ್ತಿ ಯೋಜನೆಯಡಿಯಲ್ಲಿ ಸಂಚರಿಸಿದ ಮಹಿಳೆಯರ ಸಂಖ್ಯೆ ಎಷ್ಟು ; ಎಷ್ಟು ಮೊತ್ತದ ಟಿಕೆಟ್ ವಿತರಿಸಲಾಗಿದೆ ; ವಿತರಿಸಿದ ಟಿಕೆಟ್ ಮೊತ್ತವನ್ನು ರಾಜ್ಯ ಸರ್ಕಾರವು ಸಕಾಲದಲ್ಲಿ ಪಾವತಿಸಿದೆಯೇ ; ಪಾವತಿಸದೇ ಬಾಕಿ ಉಳಿಸಿಕೊಂಡ ಮೊತ್ತ ಎಷ್ಟು ಮತ್ತು ಯಾವ ಕಾಲಮಿತಿಯೊಳಗೆ ಪಾವತಿ ಮಾಡಲಾಗುವುದು ಹಾಗೂ ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ ; ಯಾವ ಮೂಲದಿಂದ ಸದರಿ ಬಾಕಿ ಮೊತ್ತವನ್ನು ಸರಿಪಡಿಸಲಾಗಿದೆ ; ಬಾಕಿ ಉಳಿಸಿಕೊಂಡಿರುವುದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾದಂತಾಗುವುದಲ್ಲವೇ ;

(ಈ) ಸದರಿ ಸಾರಿಗೆ ಸಂಸ್ಥೆಗಳಿಂದ ಡಿಸೆಂಬರ್ ೨೦೨೫ರ ಅಂತ್ಯದವರೆಗೆ ಭವಿಷ್ಯ ನಿಧಿ, ನಿವೃತ್ತ ನೌಕರರ ಉಪಧನ, ರಜೆ ನಗದೀಕರಣ, ಸಿಬ್ಬಂದಿಗಳಿಗೆ ಬಾಕಿ, ಇಂಧನ ಖರೀದಿ, ಪೂರೈಕೆದಾರರಿಗೆ ಪಾವತಿಸಬೇಕಾದ ಬಾಕಿ ಮೊತ್ತ ಸಂಸ್ಥೆಗಳ ಸಾಲದ ಹೊಣೆಗಾರಿಕೆ ಮೊತ್ತದ ಬಾಕಿ ಪಾವತಿಗಳ ಮಾಹಿತಿಯನ್ನು ನೀಡುವುದು ;

(ಉ) ಸದರಿ ಬಾಕಿಯನ್ನು ಪಾವತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಯಾವ ಕಾಲಮಿತಿಯೊಳಗೆ ಬಾಕಿ ಮೊತ್ತವನ್ನು ಪಾವತಿಸಲಾಗುವುದು ; ಬಾಕಿ ಉಳಿಸಿಕೊಳ್ಳಲು ಸ್ಪಷ್ಟ ಕಾರಣಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

# ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳ ಪ್ರಕರಣಗಳ ಕುರಿತು

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫ (೨೫೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯ ವ್ಯಾಪ್ತಿಯ ರಸ್ತೆ ಮಾರ್ಜಿನಿನಲ್ಲಿ ಕಟ್ಟಿರುವಂತಹ ಕಟ್ಟಡಗಳ ಸಂಖ್ಯೆ ಎಷ್ಟು ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಜಿಲ್ಲಾಧಿಕಾರಿಯವರು ರಸ್ತೆ ಮಾರ್ಜಿನಿನಲ್ಲಿ ಕಟ್ಟಿರುವಂತಹ ಕಟ್ಟಡಗಳಿಗೆ ಅನ್ಯ ಸಂಕ್ರಮಣ/ಭೂ ಪರಿವರ್ತನೆ ಆದೇಶ ಕೊಟ್ಟಿದ್ದಾರೆಯೇ ; (ಮಾಹಿತಿ ನೀಡುವುದು)

(ಇ) ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ರಸ್ತೆ ಮಾರ್ಜಿನಿನಲ್ಲಿ ಬರುವ ಬಳದರೆ ಗ್ರಾಮದ ಸರ್ವೇ ನಂ. ೨೬೦ರ ೨.೨೦ ಎಕರೆ ಹಿಡುವಳಿ ಜಮೀನಿನಲ್ಲಿ ಅಕ್ರಮವಾಗಿ ವಾಣಿಜ್ಯ ಕಟ್ಟಡ ಕಟ್ಟಿರುವ ಜಾಗಕ್ಕೆ ದಿ. ೦೭.೧೧.೨೦೨೩ರಂದು ಕಾನೂನು ಉಲ್ಲಂಘಿಸಿ ಭೂ ಪರಿವರ್ತನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಾನೂನು ಉಲ್ಲಂಘಿಸಿ ಮಾಡಿರುವ ಆದೇಶದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಈ ಅನಧಿಕೃತ ಕಟ್ಟಡ ತೆರವುಗೊಳಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ನೀಡುವುದು)

# ಬಿ.ಎಂ.ಟಿ.ಸಿ. ಸಂಸ್ಥೆಯ ವ್ಯಾಪ್ತಿಯ ಜಮೀನುಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೨೬ (೨೦೭) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಒಟ್ಟು ಜಮೀನು ಎಷ್ಟು ; ಈ ಜಮೀನಿನಲ್ಲಿ ಎಷ್ಟು ಜಾಗವನ್ನು

ಉಪಯೋಗಿಸಿಕೊಳ್ಳಲಾಗಿದೆ ; ಮತ್ತು ಎಷ್ಟು ಜಾಗ ಅನುಪಯುಕ್ತವಾಗಿ ಉಳಿದುಕೊಂಡಿದೆ ;

(ಆ) ಸದರಿ ಸಂಸ್ಥೆಯ ಒಟ್ಟು ಜಮೀನಿನಲ್ಲಿ ಎಷ್ಟು ಜಮೀನು ಮೊಕದ್ದಮೆಯಲ್ಲಿದೆ ; ಸದರಿ ಮೊಕದ್ದಮೆಗಳು ಯಾವ ವರ್ಷಗಳಿಂದ ಬಾಕಿ ಇವೆ ಮತ್ತು ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿವೆ ;

(ಇ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸುಪರ್ದಿಯಲ್ಲಿ ಎಷ್ಟು ವಿದ್ಯುತ್ ಚಾಲಿತ ಬಸ್ಸುಗಳು ಇವೆ ; ಈ ಬಸ್‌ಗಳಲ್ಲಿ ಬಿ.ಎಂ.ಟಿ.ಸಿ. ಒಡೆತನದ ಬಸ್‌ಗಳು ಮತ್ತು ಖಾಸಗಿ ಒಡೆತನದ ಬಸ್‌ಗಳು ಎಷ್ಟು ;

(ಈ) ಬೆಂಗಳೂರು ನಗರ ಅಂದಾಜು ಜನಸಂಖ್ಯೆ ಒಟ್ಟು ೧ ಕೋಟಿ ೪೦ ಲಕ್ಷದಷ್ಟಿದ್ದು, ಈ ಜನಸಂಖ್ಯೆ ಅನುಗುಣವಾಗಿ ಬಸ್‌ಗಳನ್ನು ಪೂರೈಸಲು ಯಾವ ರೀತಿಯ ಅಧ್ಯಯನ ನಡೆಸಲಾಗುತ್ತಿದೆ ? (ಮಾಹಿತಿ ನೀಡುವುದು)

## ಹಿಂದುಳಿದ ವರ್ಗದ ಅಲೆಮಾರಿ/ಅರೆ ಅಲೆಮಾರಿ ಜನಾಂಗಕ್ಕೆ ವಸತಿ ನೀಡುವ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ) –**

೨೭ (೨೧೮) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಡವರಿಗೆ ಮನೆಗಳನ್ನು ಮಂಜೂರು ಮಾಡಲು ಯಾವ ಯಾವ ವಸತಿ ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗಿದೆ ;

(ಆ) ಈ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಮನೆಗಳ ಸಂಖ್ಯೆ ಎಷ್ಟು ; ಮತ್ತು ಯಾವ ಯಾವ ಜಾಗದಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ ;

(ಇ) ಮನೆಗಳ ಘಟಕ ವೆಚ್ಚ ಎಷ್ಟು; ಫಲಾನುಭವಿಗಳು ಭರಿಸಬೇಕಾದ ವಂತಿಕೆ ಎಷ್ಟು ಮತ್ತು ಸರ್ಕಾರ ನೀಡುವ ಸಹಾಯಧನ ಎಷ್ಟು ; (ವಿವರಗಳನ್ನು ನೀಡುವುದು)

(ಈ) ಈ ಮನೆಗಳನ್ನು ಯಾವಾಗ ಹಂಚಿಕೆ ಮಾಡಲಾಗುವುದು ; ಫಲಾನುಭವಿಗಳನ್ನು ಬೆಂಗಳೂರು ನಗರ ವಸತಿ ಯೋಜನೆಯಡಿ ಆಯ್ಕೆ ಮಾಡುವ ವಿಧಾನಗಳು ಯಾವುವು ; ಯಾವ ಮಾನದಂಡಗಳನ್ನು ಫಲಾನುಭವಿಗಳ ಆಯ್ಕೆಗೆ ಅನುಸರಿಸಲಾಗುವುದು ;

(ಉ) ಹಿಂದುಳಿದ ವರ್ಗಗಳ ಅಲೆಮಾರಿ ಮತ್ತು ಅರೆ ಅಲೆಮಾರಿಗಳ ವರ್ಗದ ಬಡವರಿಗೆ ಮನೆಗಳನ್ನು ಹಂಚಿಕೆ ಮಾಡಲು ಅವಕಾಶವಿದೆಯೇ ; ಇದ್ದಲ್ಲಿ, ಎಷ್ಟು ಮನೆಗಳನ್ನು ಮೀಸಲಿಡಲಾಗುತ್ತದೆ ?

## ಬೀದರ್ ಜಿಲ್ಲೆಯಲ್ಲಿ ಪಶುವೈದ್ಯಕೀಯ ಸೇವೆಗಳ ಕೊರತೆ ಮತ್ತು ಜಾನುವಾರುಗಳ ಹಿತರಕ್ಷಣೆಯ ಕುರಿತು

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೨೮ (೨೨೪) ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಪಶುವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಜಿಲ್ಲೆಯಲ್ಲಿ ಮಂಜೂರಾದ ಒಟ್ಟು ಪಶುವೈದ್ಯರ ಹುದ್ದೆಗಳೆಷ್ಟು ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕಳೆದ ಎರಡು ವರ್ಷಗಳಲ್ಲಿ ಜಿಲ್ಲೆಯಲ್ಲಿ ಕಾಣಿಸಿಕೊಂಡ 'ಚರ್ಮಗಂಟು ರೋಗ' (Pumpy Skin Disease) ದಿಂದ ಮೃತಪಟ್ಟ ಜಾನುವಾರುಗಳ ಸಂಖ್ಯೆ ಎಷ್ಟು ; ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಸರ್ಕಾರ ಘೋಷಿಸಿದ ಪರಿಹಾರ ಹಣವನ್ನು ಎಲ್ಲರಿಗೂ ವಿತರಿಸಲಾಗಿದೆಯೇ ; ಬಾಕಿ ಇರುವ ಪ್ರಕರಣಗಳೆಷ್ಟು ;

(ಇ) ಬೀದರ್ ಜಿಲ್ಲೆಯ ಗಡಿ ಭಾಗಗಳಲ್ಲಿ ಜಾನುವಾರುಗಳ ಅಕ್ರಮ ಸಾಗಾಣಿಕೆ ಮತ್ತು ಕಳ್ಳಸಾಗಾಣಿಕೆ ತಡೆಯಲು ಇಲಾಖೆ ಕೈಗೊಂಡಿರುವ ಬಿಗಿ ಕ್ರಮಗಳೇನು ; ಕಳೆದ ಒಂದು ವರ್ಷದಲ್ಲಿ ದಾಖಲಾದ ಪ್ರಕರಣಗಳೆಷ್ಟು ;

(ಈ) ಜಿಲ್ಲೆಯ ಬಹುತೇಕ ಪಶು ಆಸ್ಪತ್ರೆಗಳು ಸ್ವಂತ ಕಟ್ಟಡವಿಲ್ಲದೆ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಆಸ್ಪತ್ರೆಗಳ ನವೀಕರಣಕ್ಕೆ ಹಾಗೂ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿದ ಅನುದಾನವೆಷ್ಟು ;

(ಉ) ಬೇಸಿಗೆಯ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಮೇವಿನ ಕೊರತೆ ಉಂಟಾಗದಂತೆ ತಡೆಯಲು ಸರ್ಕಾರ ರೂಪಿಸಿರುವ ಮುನ್ನೆಚ್ಚರಿಕೆ ಕ್ರಮಗಳೇನು ; ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ರಾಜ್ಯದ ಕಂದಾಯ ಇಲಾಖೆಯಡಿ ಬರುವ ಉಪನೋಂದಣಾಧಿಕಾರಿ ಕಛೇರಿಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೨೯ (೨೦೪) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಹುದ್ದೆವಾರು ಮಾಹಿತಿ ಒದಗಿಸುವುದು)

(ಇ) ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ನೋಂದಣಿ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ನೋಂದಣಿಯನ್ನು ತ್ವರಿತಗತಿಯಲ್ಲಿ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳಾವುವು ;

(ಈ) ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿ ಕಛೇರಿಗಳಲ್ಲಿ ಜನಸಾಮಾನ್ಯರಿಗಿಂತ ದಲ್ಲಾಳಿಗಳೇ ಕಾಣಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಇಂತಹ ಅಕ್ರಮ ದಲ್ಲಾಳಿಗಳ ಹಾವಳಿ ತಪ್ಪಿಸಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ?

# ಭೂ ಸುರಕ್ಷಾ ಯೋಜನೆಯ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೩೦ (೨೨೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯ ಯಾವ ಕಾರ್ಯಾಲಯಗಳ ದಾಖಲೆಗಳನ್ನು ಭೂಸುರಕ್ಷಾ ಯೋಜನೆಯಲ್ಲಿ ಸ್ಕ್ಯಾನ್ ಮಾಡಿ ಗಣಕೀಕರಣ ಮಾಡಲಾಗಿದೆ ;

(ಆ) ತುಮಕೂರು ಜಿಲ್ಲೆಯ ಪ್ರತಿ ಕಾರ್ಯಾಲಯಗಳಲ್ಲಿ ಇರುವ ಕಡತಗಳೆಷ್ಟು ; ಎಷ್ಟು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಗಣಕೀಕರಣ ಮಾಡಲಾಗಿದೆ ; (ತಾಲ್ಲೂಕುವಾರು, ಕಾರ್ಯಾಲಯವಾರು ವಿವರ ನೀಡುವುದು)

(ಇ) ತುಮಕೂರು ಜಿಲ್ಲೆಯಲ್ಲಿ ಇರುವ ಭೂ ಮಂಜೂರಾತಿಯ ಕಡತಗಳ ಸಂಖ್ಯೆ ಎಷ್ಟು ; ಎಷ್ಟು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಗಣಕೀಕರಣ ಮಾಡಲಾಗಿದೆ ; ಬಾಕಿಯಿರುವ ಕಡತಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಕಾರ್ಯಾಲಯವಾರು ವಿವರ ನೀಡುವುದು)

(ಈ) ಭೂ ಮಂಜೂರಾತಿಯ ದಾಖಲೆಗಳನ್ನು ಹಲವು ಕಾರ್ಯಾಲಯಗಳಲ್ಲಿ ಸ್ಕ್ಯಾನ್ ಮಾಡಿ ಗಣಕೀಕರಣ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸ್ಕ್ಯಾನ್ ಮಾಡಿ ಗಣಕೀಕರಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ – ಪ್ರತಿಗಳು

**List of Questions for Oral Answers**

**Total No. of Questions - 15**

# LIST - 2

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## Wednesday, the 28th January, 2026

---

**GROUP - III**

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

**CONSTRUCTION OF KENI PORT IN ANKOLA TALUK OF KARWAR DISTRICT**

**Sri S.V. Sankanur (Graduates' Constituency) -**

16 (254) Will the Minister for Fisheries and Ports and Inland Water Transport be pleased to state:-

(a) the extent of kilometers (KM) covered by the western coastal of the State ; the number of ports that have been constructed in this limit and the particulars of places in which these are located ; (information be furnished)

(b) whether the decision has been taken by the State Government to construct the Keni port in Ankola taluk ; if so, the estimated expenditure thereof ;

(c) whether the permission has been obtained by the Indian Navy to construct the Keni Port ;

(d) whether it is true that the immense opposition has been expressed by the public for the construction of the Keni Port ; (information be furnished)

(e) there is a Belikeri Port already existing, the purpose for construction of another Keni Port adjacent to the same ?

**THE CHIEF MINISTER'S ONE LAKH HOUSING SCHEME**

**Sri Sharavana T.A. (Elected by Legislative Assembly) -**

17 (152) Will the Minister for Housing, Wakf and Minority Welfare be pleased to state:-

(a) the particulars of criterias on which the eligible beneficiaries would be selected under the Chief Minister's One Lakh Housing Scheme; the total number of applications that have been submitted under the said scheme and the number of eligible beneficiaries; and the number of plots (houses) that have been constructed currently under this scheme and the places where they are situated ;

(b) the number of beneficiaries have paid an advance amount under the said scheme and the total amount thereof ; the reasons for the delay in the allotment of houses ; (details be furnished)

(c) whether there is an intention for the Government to provide the housing facilities to residents of Kogilu layout in Bengaluru city; if so, the prevailing criterias for providing the housing facilities to the residents of Kogilu layout before the eligible beneficiaries who are awaiting after submitting the application earlier ? (complete information be furnished)

**PROGRESS OF E-PAUTI KHATA IN THE STATE**

**Sri P.H. Pujar (Local Authorities Constituency)**

18 (127) Will the Minister for Revenue be pleased to state:-

(a) the pauti khata scheme has been implemented by the Government in 2020 to execute khata for the land which has in the name of family head to be transfered again to the name of their children or legal heirs after the death of the family head, whether it has come to the notice of the Government that the land owners are facing severe hardship since progress of the said E-pauti scheme has been stagnated due to the improper implementation ; if so, the measures taken by the Government to setright the same ;

(b) the progress achieved in the State since implementation of this scheme ; especially the percentage of progress that has been achieved in the pauti khata in Bagalkot and Vijayapur district ; (talukwise and districtwise information be furnished)

(c) the measures taken by the Government to intensify the progress of the said scheme ?

## THE ROAD DEVELOPED BY THE PUBLIC WORKS DEPARTMENT

**Sri M.L. Anil Kumar (Local Authorities Consitituency) -**

19 (169) Will the Minister for Public Works be pleased to state:-

(a) the particulars of road works projects that have been chalked out which are connecting to Kolar and Kolar district from 2024 till date under the Karnataka State Highway Improvement Project (KSHIP) ; the expenditure of each work ; the present stage of the same ; (complete information be furnished)

(b) the particulars of road works projects that have been chalked out which are connecting to Kolar and Kolar district from 2024 till date under the Karnataka Road Development Corporation; the expenditure of each work; the present stage of the same ; (complete information be furnished)

(c) the present stage of development of the road work under PPP-DBFOMT- Hybrid annuity covering the length of 36.586 K.M from Vemagal to Tamil Nadu border ; (complete information be furnished)

(d) the present stage of development of road work under PPP-DBFOMT- Hybrid annuity covering the length of 25.615 K.M from Hosakote to Malur and Malur industrial area of Malur elevated corridor in the State ; ( complete information be furnished)

(e) the present stage of the development of the road work under PPP-DBFOMT-Hybrid annuity covering the length of 49.284 K.M of Devanahalli-Vemagal-Kolar ? (complete information be furnished)

**STRICT COMPLIANCE OF RULES IN TOLL PLAZA**

**Sri D.S.Arun (Local Authorities Constituency) -**

20 (186) Will the Minister for Public Works be pleased to state:-

(a) whether it has come to the notice of the Government that recently an incident of insulting and abusing has been occurred in the pretext of verification by stopping of vehicle of the Hon'ble member of the Legislative Council while travelling in the toll plaza of Bengaluru-Solapur National Highway-52 out skirts of Vijayapur city ;

(b) the steps taken by the Government so far regarding this incident ; whether the legal action has been initiated against the culprit toll personnel or agency ; (complete details be furnished)

(c) whether it has come to the notice of the Government that the unauthorized vehicles are travelling in the separate lanes which are reserved for the ambulance and the vehicles of dignitaries (VIP) at toll plazas ; the details of the orders issued by the Government to prevent the same and implementation of the rules ?

## COMMENCEMENT OF REGIONAL TRANSPORT COMMISSIONER'S (RTO) OFFICE IN SINDHANUR TALUK

**Sri Basanagouda Badarli (Elected by Legislative Assembly)** -

21 (175) Will the Minister for Transport and Muzrai be pleased to state:-

(a) whether it has come to the notice of the Government that Sindhanur taluk is geographically and population-wise the largest taluk and 2nd largest taluk for purchasing of vehicles in the Raichur district annually ;

(b) whether it has come to the notice of the Government that Sindhanur taluk is located approximately 93 K.M. distance from the district head quarter ;

(c) if so, the criterias which have not been fulfilled for opening of the Regional Transport Commissioner's Office (RTO) in Sindhanur taluk ;

(d) the stand of the Government with regard to commencement of the Regional Transport Commissioner's Office (RTO) in Sindhanur taluk ? (information in this regard be furnished)

## WORKS TAKEN UP UNDER PUBLIC WORKS DEPARTMENT IN DHARWAD CITY

**Sri Pradeep Shettar (Local Authorities Consitituency) -**

22 (239) Will the Minister for Public Works be pleased to state:-

(a) the number of works that have been taken up under the Public Works Department in Dharwad city limits ; (assembly constituencywise brief information be furnished)

(b) the particulars of works that have been taken up in the City Municipal Corporation under the said department to Hubballi Central Assembly Constituency during the last 3 years and the grant that has been sanctioned for the said works ?

## SAFETY MEASURES IN THE GOVERNMENT AND PRIVATE BUSES OF THE STATE

**Sri Kishor Kumar Puttur (Local Authorities Consitituency) -**

23 (170)) Will the Minister for Transport and Muzrai be pleased to state:-

(a) the reasons for the accidents in sleeper and air conditioned buses in various parts of the State causing the buses to catch fire and causing loss of life ; the number of such accidents that have been occurred during the last 3 years in the State ; the number of deaths that have been occurred in such incidents ; (details be furnished)

(b) whether the safety guidelines have been issued in the Government and private air conditioned and sleeper buses which are operating in the State ; the details in this regard and guidelines copy be furnished ;

(c) whether the verification has been conducted from time to time with regard to an arrangement like emergency exit, hammers to break large glass window and fire extinguisher in the buses ; the number of buses that have been verified till date in the State ; (districtwise details be furnished)

(d) the particular of the authority examining regarding the safety of the Government and private buses; whether the guidance is being given with regard to special guidelines and safety of passengers for the things filled in the luggage boxes of the buses ;

(e) the number of accidents that have been occurred due to driving over the speed limit, drink and drive, negligence of drivers etc of the Government and private buses during the last 3 years ; (districtwise information be furnished)

(f) the prevailing hardship to undergo health check-up of drivers compulsorily while providing and renewal of Licence in the Regional Transport Offices ?

## PAY REVISION AND ARREARS OF THE EMPLOYEES AND THE LOSS OF TRANSPORT CORPORATIONS

**Sri Nirani Hanamant Rudrappa (Graduates' Constituency) -**

24 (195) Will the Minister for Transport and Muzrai be pleased to state:-

(a) the number of transport corporations which are functioning under the State Government; the number of officers and employees of all cadres who are working in the said transport corporations ; the year in which the revision of pay has been carried out for the said employees ; the rules under which the revision of pay would be carried out ; (complete information be furnished)

(b) the number of buses which are available for the service of public in the said transport corporations; the year and the number of new buses that have been provided for the various transport corporations during the last 3 years ;

(c) the number of women travelled under the Shakti Scheme during the year 2023-24, 2024-25 and 2025-26 ; the amount of ticket that has been issued; whether the amount of the issued ticket has been paid by the Government on time; the outstanding amount of the same and the time limit within which the same would be the paid and the reasons for which the same has been pending ; the sources from which the said amount has been set right ; whether it will cause financial burden to the Government due to the same has been pending ;

(d) the information of outstanding payments like the provident fund, gratuity of retired employees, leave encashment, arrears for staff, purchase of fuel, the

outstanding amount to be paid for the suppliers and the amount of liability of loans of the corporations be furnished ;

(e) the measures taken by the Government to pay the said outstanding amount ; the time limit within which the outstanding amount would be paid ; the clear reasons to remain outstanding ? (the complete information be furnished)

## CASES OF BUILDINGS IN THE LIMITS OF HASSAN DISTRICT

**Sri Suraj Revanna (Local Authorities Constituency) -**

25 (257) Will the Minister for Revenue be pleased to state:-

(a) the number of buildings that have been constructed in the road margins in the limits of Hassan district; whether it has come to the notice of the Government; if so, the manner in which the step has been taken by the Government ; (detailed information be furnished)

(b) whether any other alienation/land conversion order has been issued by the Deputy Commissioner for the buildings that have been constructed in the road margin ; (information be furnished)

(c) whether it has come to the notice of the Government that the land has been converted by violating the law on 07-10-2023 in which commercial building has been constructed illegally in the extent of 2.20 acre of holding land bearing survey No. 260 of Baladare village, which is coming in the road margin of Dandiganahalli hobli of Channarayapatna taluk in Hassan district ; if so, the steps taken by the Government with regard to the order that has been issued by violating the law ; the step taken by the Government for the eviction of this unauthorized building ? (complete information be furnished)

## LANDS IN THE LIMITS OF BENGALURU METROPOLITIAN TRANSPORT CORPORATION(B.M.T.C)

**Sri Nagaraju M. (Elected by Legislative Assembly) -**

26 (207) Will the Minister for Transport and Muzrai be pleased to state:-

(a) the total extent of land in the limits of Bengaluru Metropolitan Transport Corporation ; the extent of land that has been utilized in this land ; and the extent of land that has been remaining without utilization ;

(b) out of the total land of the said corporation, the extent of land that is under litigation ; the year from which the said litigation has been pending and the number of cases that have been settled ;

(c) the number of electric buses which are there in the possession of the Bengaluru Metropolitan Transport Corporation ; the number of buses which are owned by the B.M.T.C and owned by private in these buses ;

(d) the estimated population of Bengaluru city is 1 crore 40 lakhs, the manner in which the study is being conducted for providing of buses according to this population ? (information be furnished)

## PROVIDING HOUSING TO NOMADIC AND SEMI NOMADIC COMMUNITIES OF BACKWARD CLASSES

**Sri D.T. Srinivas (D.T.S) (Teachers' Constituency) -**

27 (218) Will the Minister for Housing, Wakf and Minority Welfare be pleased to state:-

(a) the particular of housing schemes under which the houses have been constructed to sanction the houses to poor people in the limit of Bengaluru city ;

(b) the number of houses that have been constructed under this scheme ; and the particulars of place in which the houses have been constructed ;

(c) the unit cost of the houses; the contribution to be borne by the beneficiaries and the subsidy to be provided by the Government ; (details be furnished)

(d) the date on which these houses would be allocated; the particulars of methods to select the beneficiaries under the housing scheme of Bengaluru city; the particulars of criterias that would be complied for the selection of beneficiaries ;

(e) whether there is a provision for allocating the houses to poor people who are belonging to nomadic and semi nomadic communities of backward classes ; if so, the number of houses that would be reserved ?

**LACK OF VETERINARY SERVICES AND WELFARE OF CATTLE IN BIDAR DISTRICT**

**Dr. M.G. Muley (Elected by Legislative Assembly) -**

28 (224) Will the Minister for Animal Husbandry and Sericulture be pleased to state:-

(a) whether it has come to the notice of the Government that there is a shortage of veterinary doctors and staff in Bidar district; the total number of posts of veterinary doctors that have been sanctioned and the number of posts which are lying vacant at present ; (talukwise details be furnished)

(b) the number of cattle died due to the 'lumpy skin disease' appeared in the district during the last two years; whether the amount of compensation that has been declared by the Government has been distributed to all owners of the dead cattle; the number of pending cases ;

(c) the stringent action taken by the department to prevent the illegal transportation and smuggling of cattle in the border areas of Bidar district ; the number of cases that have been lodged during the last one year ;

(d) whether it has come to the notice of the Government that the most of the veterinary hospitals of the district are in dilapidated condition without having own buildings ; the grant that has been earmarked for renovation of these hospitals and the construction of new buildings in the current year ;

(e) the precautionary measures taken by the Government to prevent the shortage of fodder in the district during the summer season ; whether the step would be taken by the Government to establish the fodder banks ?

## SUB REGISTRAR OFFICES COMING UNDER THE REVENUE DEPARTMENT OF THE STATE

**Sri K. Abdul Jabbar (Elected by Legislative Assembly) -**

29 (204) Will the Minister for Revenue be pleased to state:-

(a) the number of Sub Registrar Offices which are functioning under the Revenue Department of the State ; (complete information be furnished)

(b) the number of officers and staff who are working in the said offices ; (postwise information be furnished)

(c) whether it has come to the notice of the Government that the registration process in Sub Registrar Offices is going in slow pace manner; if so, the steps taken by the Government to speed up the registration process ;

(d) whether it has come to the notice of the Government that the brokers are found more than general public in Sub Registrar Offices due to the increase in the menace of brokers in the Sub-Registrar offices ; if so, the steps taken by the Government to prevent the menace of such illegal brokers ?

## REGARDING BHU SURAKSHA PROJECT

**Sri Chidanand M.Gowda (Graduates' Constituency) -**

30 (226) Will the Minister for Revenue be pleased to state:-

(a) the particulars of offices of the Revenue Department for which the records have been scanned and computerized under Bhu Suraksha Project ;

(b) the number of files in each offices of Tumakuru district; the number of records that have been scanned and computerized ; (talukwise and officewise details be furnished)

(c) the number of files of land grant in the Tumakuru district; the number of records that have been scanned and computerized ; the number of files which are pending ; (talukwise and officewise details be furnished)

(d) whether it has come to the notice of the Government that records of land grant are not being scanned and computerized in many offices ; if so, the steps taken by the Government to scan and computerise the documents ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, WD - - P2